**ದಿನಾಂಕಃ 17.02.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ 2 ಮತ್ತು 7 ನೇ ಪ್ರತಿವಾದಿ ಪರ ಶ್ರೀ ಜಿ.ಜಿ.ಜಿ. ವಕೀಲರಿಂದಃ–**

ದಾವಾ ಬಿ ಷೆಡ್ಯೂಲ್‌ನಲ್ಲಿ ಕ್ರಮ ಸಂಖ್ಯೆ: 3 ರ ಆಸ್ತಿಯು 2 ನೇ ಪ್ರತಿವಾದಿಗೆ ಸೇರಿರುತ್ತದೆ. ಸದರಿ ಆಸ್ತಿ ಅವರ ತಂದೆಯಿಂದ 2 ನೇ ಪ್ರತಿವಾದಿಗೆ ಬಂದಿರುತ್ತದೆ. ಸದರಿ ಆಸ್ತಿ ಪಾಲುವಿಭಾಗದ ಮೂಲಕ 2 ನೇ ಪ್ರತಿವಾದಿಗೆ ಬಂದಿರುತ್ತದೆ. 2 ನೇ ಪ್ರತಿವಾದಿ ಸದರಿ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದರು ಎಂದರೆ ಸಾಕ್ಷಿಯು 7 ನೇ ಪ್ರತಿವಾದಿಗೆ ಮಾರುವವರೆಗೂ ಅವರೇ ಸ್ವಾಧೀನದಲ್ಲಿ ಇದ್ದರು ಎಂದು ಹೇಳುತ್ತಾರೆ. ನಿಪಿ–19 ಮತ್ತು 20 ರ ಪ್ರಕಾರ 2 ನೇ ಪ್ರತಿವಾದಿ ದಾವಾ ಬಿ ಷೆಡ್ಯೂಲ್‌ನ ಮೂರನೇ ಆಸ್ತಿಯನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು 2 ನೇ ಪಾಲುವಿಭಾಗ ಪತ್ರವನ್ನು ಸೃಷ್ಠಿ ಮಾಡಿಕೊಂಡು ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ.

7 ನೇ ಪ್ರತಿವಾದಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ಅದಕ್ಕೆ ನಾನು ತಕರಾರು ಸಲ್ಲಿಸಿದ್ದೆನು ಎಂದರೆ ಸರಿ. ನನ್ನ ತಕರಾರನ್ನು ತಿರಸ್ಕರಿಸಿ 7 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿಯು ನ್ಯಾಯಾಲಯದ ತೀರ್ಪಿಗೆ ಒಳಪಟ್ಟು ಖಾತೆ ಬದಲಾವಣೆ ಮಾಡಲು ರಾಜಸ್ವ ನಿರೀಕ್ಷಕರಿಗೆ ಆದೇಶವಾಗಿರುತ್ತದೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯ ವಿರುದ್ಧ ನ್ಯಾಯಾಲಯದಲ್ಲಿ ಆಸ್ತಿಯನ್ನು ಮಾರಾಟ ಮಾಡದಂತೆ ಯಾವುದೇ ತಡೆಯಾಜ್ಞೆ ಇರಲಿಲ್ಲ ಎಂದರೆ ಸಾಕ್ಷಿಯು ತಡೆಯಾಜ್ಞೆ ಕೋರಿ ಸಲ್ಲಿಸಿದ ಅರ್ಜಿ ಬಾಕಿ ಇರುವಾಗಲೇ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಅರ್ಜಿಯು ಈಗ ವಜಾ ಆಗಿರುತ್ತದೆ.

ಬಿ ಷೆಡ್ಯೂಲ್‌ನ 3 ನೇ ದಾವಾ ಆಸ್ತಿ ಈಗ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಅಕ್ರಮವಾಗಿ ಮಾಡಿಕೊಂಡ ಕ್ರಯಪತ್ರ ಆಧಾರದ ಮೇಲೆ ಅದು 7 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ಪ್ರಸ್ತುತ ಬಿ ಷೆಡ್ಯೂಲ್‌ನ 3 ನೇ ದಾವಾ ಆಸ್ತಿ ಈಗ 7 ನೇ ಪ್ರತಿವಾದಿಯ

ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಬಿ ಷೆಡ್ಯೂಲ್‌ನ 3 ನೇ ದಾವಾ ಆಸ್ತಿ ಪ್ರಸ್ತುತ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳಲ್ಲಿ 7 ನೇ ಪ್ರತಿವಾದಿಯ ಹೆಸರಿಗೆ ಇರುವ ಪಹಣಿ ಪತ್ರಿಕೆ ನಿಪಿ-13 ಎಂದು ಗುರುತಿಸಿಕೊಂಡಿರುತ್ತದೆ. ಸದರಿ ದಾಖಲೆಯಲ್ಲಿ 7 ನೇ ಪ್ರತಿವಾದಿಯು ಸ್ವಾಧೀನದಲ್ಲಿ ಇರುತ್ತಾರೆ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಅಕ್ರಮವಾಗಿ ನಮೂದಾಗಿರುತ್ತದೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯು ತನ್ನ ಮಾಲೀಕತ್ವದಲ್ಲಿರುವ ಆಸ್ತಿಯನ್ನೇ 7 ನೇ ಪ್ರತಿವಾದಿಗೆ ಮಾರಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ದಾವಾ ಚಾಲ್ತಿಯಲ್ಲಿರುವಾಗ ಮಾರಿರುತ್ತಾರೆ ಎಂದು ಹೇಳುತ್ತಾರೆ. ಪ್ರಸ್ತುತ ದಾವೆಯು ಪಾಲುವಿಭಾಗಕ್ಕೆ ಸಲ್ಲಿಸಿದ ದಾವೆಯಲ್ಲ ಎಂದರೆ ಸರಿ. (ಸಾಕ್ಷಿ ವಿಚಾರಣಾ ಪೆಟ್ಟಿಗೆಯಲ್ಲಿ ನಿಂತಿರುವ ಸಾಕ್ಷಿದಾರರು ವಕೀಲರಾಗಿದ್ದು ಅವರಿಗೆ ನ್ಯಾಯಾಲಯದ ಘನತೆ ಗೌರವವನ್ನು ಕಾಪಾಡುವಂತೆ ಹಲವು ಬಾರಿ ಸೂಚಿಸಲಾಗಿದೆ).

ನಿಪಿ-15 ದಾಖಲೆಯನ್ನು ಹಾಜರುಪಡಿಸಿದ್ದು ಮಾರುಕಟ್ಟೆ ಬೆಲೆ ಮತ್ತು ಸರ್ಕಾರಿ ಬೆಲೆ ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ಮಾರುಕಟ್ಟೆ ಬೆಲೆ ಮತ್ತು ಸರ್ಕಾರಿ ಬೆಲೆ ಬೇರೆ ಬೇರೆ ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾರುಕಟ್ಟೆ ಬೆಲೆ ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಬೆಲೆಗಿಂತ ಮಾರುಕಟ್ಟೆ ಬೆಲೆ ಸುಮಾರು 10-15 ಪಟ್ಟು ಜಾಸ್ತಿ ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಜೊತೆಗೆ ಸಲ್ಲಿಸಿದ ಕಚ್ಚಾ ನಕಾಶೆಯನ್ನು ದಾವೆಗೆ ಪೂರಕವಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಕಚ್ಚಾ ನಕಾಶೆಯಲ್ಲಿ ತೋರಿಸಿರುವ ದಾರಿ ವಾಸ್ತವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ದಾರಿಯ ಅನುಭವದ ಹಕ್ಕಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಸುಳ್ಳು ಅಂಶಗಳನ್ನು ಒಳಗೊಂಡು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ

ಸರಿಯಲ್ಲ. 2 ನೇ ಪ್ರತಿವಾದಿ ತನ್ನ ಮಾಲೀಕತ್ವದಲ್ಲಿರುವ ಆಸ್ತಿಯನ್ನು ಯಾರಿಗೆ ಬೇಕಾದರೂ ಮಾರಾಟ, ದಾನ ಮತ್ತು ಮರಣ ಶಾಸನ ಇತ್ಯಾದಿಗಳನ್ನು ಮಾಡುವ ಹಕ್ಕನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಆಸ್ತಿ ದಾವಾ ಎ ಆಸ್ತಿಗಳಿಗೆ ಹೊಂದಿಕೊಂಡು ಇದ್ದು ಅದನ್ನು ಮಾರಾಟ ಮಾಡುವಾಗ ಮೊದಲನೇ ಅವಕಾಶವನ್ನು ನಮಗೇ ಕೊಡಬೇಕು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ನಮ್ಮ ಅನುಭವದ ಹಕ್ಕಿಗೆ ತೊಂದರೆ ಮಾಡುತ್ತಿದ್ದಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿ ಷೆಡ್ಯೂಲ್‌ನ 3 ನೇ ದಾವಾ ಆಸ್ತಿಯ ಮಧ್ಯದಲ್ಲಿ ಯಾವುದೇ ದಾರಿ ಇಲ್ಲ, ಬದುವಿನಲ್ಲಿ ದಾರಿ ಇರುತ್ತದೆ ಎಂದರೆ ಸರಿಯಲ್ಲ. 1982-83 ರ ಜುಬಾನಿ ಪಾರೀಕತ್ತು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಆದರೆ ಮುಟೇಶನ್ ಪತ್ರವನ್ನು ಹಾಜರುಪಡಿಸಿರುತ್ತೇನೆ. ಜುಬಾನಿ ಪಾರೀಕತ್ತಿನಲ್ಲಿ ಕಚ್ಚಾ ನಕಾಶೆಯಲ್ಲಿ ತೋರಿಸಿದ ದಾರಿಗಳ ಬಗ್ಗೆ ಬರೆದಿರುವುದಿಲ್ಲ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಸತ್ಯಾಂಶ ತಿಳಿಯುತ್ತದೆ ಎನ್ನುವ ಕಾರಣಕ್ಕಾಗಿಯೇ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿರುವ ಪ್ರಾರ್ಥನೆ ಕಾನೂನಿನಲ್ಲಿ ಊರ್ಜಿತವಲ್ಲ ಎಂದರೆ ಸರಿಯಲ್ಲ. 2 ಮತ್ತು 7 ನೇ ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ಅಂಶಗಳಿಂದ ಕೂಡಿದ ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ-ಸವಾಲುಃ 1, 3 ರಿಂದ 5 ನೇ ಪ್ರತಿವಾದಿಗಳು ಏಕತರ್ಫಿ ಇರುತ್ತಾರೆ. 6 ನೇ ಪ್ರತಿವಾದಿ ಪರ ವಕೀಲರು ಪಾಟೀ-ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.